17 ಡಿಸೆಂಬರ್ 2023
ವಿಕ್ರಮ VIKRAMA

# ಅಮೆರಿಕದ ಹಿಂದು ಅಧ್ಯಕ್ಷ?

## ಸಂಯುಕ್ತ ಸಂಸ್ಥಾನದ ರಾಜಕೀಯದಲ್ಲಿ ಹೊಸ ಮಿಂಚು: ವಿವೇಕ್ ರಾಮಸ್ವಾಮಿ





● ಡಾ. ಮೈ.ಶ್ರೀ. ನಟರಾಜ
ಪೊಟೋಮೆಕ್, ಮೇರೀಲ್ಯಾಂಡ್, ಯುಎಸ್‌ಎ

ಅಮೆರಿಕದಲ್ಲಿ 2024ರ ಅಧ್ಯಕ್ಷೀಯ ಚುನಾವಣಾ ರಾಜಕೀಯದ ಬಿಸಿ ಏರುತ್ತಲಿದೆ. ಆಡಳಿತದಲ್ಲಿರುವ ಹಾಲಿ ಅಧ್ಯಕ್ಷ ಬೈಡನ್ ಬಗ್ಗೆ ಆತನ ಪಕ್ಷದ ಸದಸ್ಯರಲ್ಲೇ ತಣ್ಣನೆಯ ಪ್ರತಿಕ್ರಿಯೆ ಹುಟ್ಟಿಸುತ್ತಿದೆ. 81 ದಾಟಿದ, ನಡೆಯುವಾಗ ಅದರಲ್ಲೂ ಮೆಟ್ಟಿಲೇರುವಾಗ ಮುಗ್ಗರಿಸುವ, ಮಾತುಗಳ ಮಧ್ಯೆ ವಾಗ್ಝರಿಯನ್ನು ಕಳೆದುಕೊಂಡು ಪರದಾಡುವ ಬೈಡನ್ ಅನುಭವಿಯಾದರೂ ಯುವ ಮತದಾರರನ್ನು ಆಕರ್ಷಿಸುವಲ್ಲಿ ವಿಫಲನಾದಂತಿದೆ. ವಿರೋಧ ಪಕ್ಷದ ಕಣದಲ್ಲಿರುವ ನಾಲ್ಕಾರು ಉಮೇದುವಾರರಿಗಿಂತ ಮೈಲಿಗಳಷ್ಟು ಮುಂದಿರುವ ಟ್ರಂಪ್ ಮಹಾಶಯ ಸಹ ವಯಸ್ಸಾದವನೇ. ಆದರೆ, ಅಮೆರಿಕವನ್ನು ಮಹಾನ್ ಮಾಡುವುದಕ್ಕಾಗಿಯೇ ಭಗವಂತ ಆತನ ಸೃಷ್ಟಿ ಮಾಡಿರುವನೆಂದು ನಂಬಿರುವ 'ಮಿದುಳು-ಮಡಿಯಾದ' ಅನುಯಾಯಿಗಳು ಸಾಕಷ್ಟಿದ್ದಾರೆ. ಹೀಗಾಗಿ, ಪ್ರೈಮರಿ ಡಿಬೇಟುಗಳಲ್ಲಿ ಭಾಗವಹಿಸದೆಯೂ ಆತನೇ ರಿಪಬ್ಲಿಕನ್ ಪಕ್ಷದ ಉಮೇದುವಾರ ಆಗುವ ಸಾಧ್ಯತೆಯೇ ಹೆಚ್ಚೆನಿಸುತ್ತಿದೆ. ಹಾಗಾದ ಪಕ್ಷದಲ್ಲಿ ಮತ್ತೊಮ್ಮೆ ಈ ಇಬ್ಬರು ಪ್ರತಿದ್ವಂದ್ವಿಗಳ ಸ್ಪರ್ಧೆ ಅಮೆರಿಕದ ಸರಾಸರಿ ಮತದಾರರಲ್ಲಿ ಯಾವ ಉತ್ಸಾಹವನ್ನೂ ಹುಟ್ಟಿಸುತ್ತಿಲ್ಲ. ಇದರ ಮಧ್ಯದಲ್ಲಿ, ಡೆಮೋಕ್ರ್ಯಾಟಿಕ್ ಪಕ್ಷವು ಎಡಪಂಥೀಯರ ಅತೀವ ಪ್ರಭಾವಕ್ಕೆ ಒಳಗಾಗಿದೆಯೆಂದೂ, ರಿಪಬ್ಲಿಕನ್ ಪಕ್ಷವು ಅತಿರೇಕದ ಬಲಪಂಥೀಯರ ಕಪಿಮುಷ್ಟಿಯಲ್ಲಿ ಸಿಕ್ಕಿಬಿದ್ದಿದೆಯೆಂದೂ, ತತ್ಫಲವಾಗಿ ಅಮೆರಿಕದಲ್ಲಿ ಮಧ್ಯಮಮಾರ್ಗಿಗಳ ಸ್ವತಂತ್ರ ರಾಜಕೀಯ ಪಕ್ಷದ ಅಭ್ಯರ್ಥಿ ಚುನಾವಣೆಯಲ್ಲಿ ಭಾಗವಹಿಸುವ ಸಾಧ್ಯತೆ ಇದೆಯೆಂದೂ ಕಂಡುಬರುತ್ತಿದೆ. ಈ ಹಿನ್ನೆಲೆಯಲ್ಲಿ 2024ರ ಚುನಾವಣೆ ಸ್ವಾರಸ್ಯಕರವಾಗಿರುವುದರಲ್ಲಿ ಸಂದೇಹವಿಲ್ಲ.

ಲಂಡನ್ನಿನ ನಂಬರ್ 10, ಡೌನಿಂಗ್ ಸ್ಟ್ರೀಟ್‌ನಲ್ಲಿ ಭಾರತೀಯ ಮೂಲದ ರಿಷಿ ಸುನಕ್ ತನ್ನ ಮಡದಿ ಮಕ್ಕಳೊಂದಿಗೆ ದೀಪಾವಳಿ ಆಚರಿಸುತ್ತಿದ್ದ ಚಿತ್ರವನ್ನು ಟಿವಿ ಮೇಲೆ ನೋಡಿದಾಗ ಮನಸ್ಸಿನಲ್ಲಿ ಒಂದು ಪುಳಕವೆದ್ದಿತ್ತು. ಶೀಘ್ರ-ಭವಿಷ್ಯದಲ್ಲಿ ಭಾರತೀಯ ಮೂಲದವನೊಬ್ಬ ಅಮೆರಿಕದ ಅಧ್ಯಕ್ಷನಾದರೆ! ಆ ಒಂದು ಊಹೆಯೇ ರೋಮಾಂಚನಕ್ಕೆ ಕಾರಣವಾಯಿತು. ಶ್ವೇತಭವನದ ಹೊಸಿಲುಗಳ ಮುಂದೆ ರಂಗೋಲಿ, ಹಿತ್ತಲಲ್ಲಿ ತುಳಸಿಕಟ್ಟೆ, ದೀವಳಿಗೆಯಂದು ಬಣ್ಣ-ಬಣ್ಣದ ಮಣ್ಣಿನ ದೀಪಗಳು. ಮಡದಿ ಮಕ್ಕಳೊಂದಿಗೆ ಸುರ್-ಸುರ್ ಬತ್ತಿ, ಭೂಚಕ್ರ, ವಿಷ್ಣುಚಕ್ರ, ಪಟಾಕಿಗಳೊಂದಿಗೆ ದೀವಳಿಗೆ ಆಚರಿಸುವ ನಲವತ್ತು ಮೀರದ ಯುವಕ, ಅವನಿಗೆ ತಕ್ಕ ಮಡದಿ, ಪುಟ್ಟ ಮಕ್ಕಳು. ಇದು ಸಾಧ್ಯವೇ? ವಿಶ್ವದ ಮೂಲೆ-ಮೂಲೆಗಳಿಂದ ವಲಸಿಗರನ್ನು ಆಕರ್ಷಿಸಿ ತನ್ನವರನ್ನಾಗಿಸಿಕೊಳ್ಳುವ 'ಕರಗಿಸುವ ಕಡಾಯಿ' ಅಮೆರಿಕದಲ್ಲಿ ಇದು ಸಾಧ್ಯವೇ? ಸಂಭವವೇ? ಕಾದು ನೋಡಬೇಕು. 2024ರ ಅಧ್ಯಕ್ಷ ಚುನಾವಣೆಗಾಗಿ ನಡೆಯುತ್ತಿರುವ ರಿಪಬ್ಲಿಕನ್ ಪಕ್ಷದ ಪ್ರೈಮರಿ ಮತದಾನಕ್ಕಾಗಿ

## ಕಣದಲ್ಲಿರುವ ಉಮೇದುದಾರರು

### ಡೆಮಾಕ್ರಟಿಕ್ ಪಕ್ಷ


ಬೈಡನ್


ವಿಲಿಯಮ್ಸನ್


ಫಿಲಿಪ್ಸ್

### ರಿಪಬ್ಲಿಕನ್ ಪಕ್ಷ


ಟ್ರಂಪ್


ಹ್ಯಾಲಿ


ರಾಮಸ್ವಾಮಿ


ಹಚಿನ್‌ಸನ್


ಬಿಂಕ್ಲೆ


ಡಿಸ್ಯಾಂಟಿಸ್


ಕ್ರಿಸ್ಟಿ

### ಸ್ವತಂತ್ರ ಮತ್ತು ತೃತೀಯ ಪಕ್ಷ


ಕೆನಡಿ


ವೆಸ್ಟ್


ಸ್ಟೇನ್

ಪ್ರಚಾರ ಮಾಡುತ್ತಿರುವ ಬೆರಳೆಣಿಕೆಯಷ್ಟೇ ಮಂದಿಯಲ್ಲಿ ಇಬ್ಬರು ಭಾರತೀಯ ಮೂಲದ ಅಮೆರಿಕನ್ನರಿದ್ದಾರೆಂದರೆ ಅಚ್ಚರಿಯಾಗದೇ? ಅದರಲ್ಲಿ ಒಬ್ಬ ಮಹಿಳೆ ಕೂಡ ಸೇರಿರುವುದು ಅಮೆರಿಕ ವಿವಿಧತೆಗೆ ಕೊಟ್ಟಿರುವ ಆದ್ಯತೆಯ ಪ್ರತೀಕವೆನ್ನಬಹುದು.

ವಿವೇಕ್ ರಾಮಸ್ವಾಮಿ ಎಂಬ 38ರ ತರುಣ ಈ ವರ್ಷ ಅಮೆರಿಕದ ರಾಜಕೀಯದಲ್ಲಿ ಸಾಕಷ್ಟು ಧೂಳೆಬ್ಬಿಸಿರುವ ಪ್ರಚಂಡ. ಕೇರಳದ ಪಾಲಕ್ಕಾಡ್ ಅಯ್ಯರ್ ಬ್ರಾಹ್ಮಣ ಕುಟುಂಬದ ಕೂಸು. ತಂದೆ ತಾಯಿ ದಶಕಗಳ ಹಿಂದೆ ಅಮೆರಿಕೆಗೆ ವಲಸೆ ಬಂದವರು. ತಂದೆ ಕೇರಳದಲ್ಲಿ ಇಂಜಿನಿಯರಿಂಗ್ ಮಾಡಿದವ, ತಾಯಿ ಮೈಸೂರಿನ ಮೆಡಿಕಲ್ ಕಾಲೇಜಿನ ಪದವೀಧರೆ. ನಮ್ಮಲ್ಲನೇಕರಂತೆ ಅವರೂ ಕಷ್ಟಪಟ್ಟು ಮಕ್ಕಳನ್ನು ಬೆಳೆಸಿ ಅವರಿಗೆ ಉತ್ತಮ ವಿದ್ಯಾಭ್ಯಾಸ ಮಾಡಿಸಿದವರು. ವಿವೇಕ್ ಪಬ್ಲಿಕ್ ಶಾಲೆಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮಾಡಿ, ಕ್ರೈಸ್ತ ಸಂಸ್ಥೆ ನಡೆಸುವ ಪ್ರೌಢಶಾಲೆಯಲ್ಲಿ ಎಲ್ಲರಿಗಿಂತ ಹೆಚ್ಚು ಅಂಕ ಗಳಿಸಿ 'ವ್ಯಾಲಿಡಿಕ್ಟೋರಿಯನ್' ಆದವನು. ಮುಂದೆ ಹಾರ್ವರ್ಡ್ ವಿವಿಯಲ್ಲಿ ಮೊದಲ ವಿಜ್ಞಾನ ಪದವಿ, ಅನಂತರ ಯೇಲ್ ವಿವಿಯಲ್ಲಿ ನ್ಯಾಯಶಾಸ್ತ್ರದಲ್ಲಿ ಪರಿಣತಿ. ಓದುವಾಗಲೇ ಕೈತುಂಬ ಸಂಪಾದಿಸಿದ ಜಾಣ. ಮುಂದೆ ಹಲವು ಕಂಪನಿಗಳ ಸಂಸ್ಥಾಪಕ–ಒಡೆಯನಾಗಿ ಮಿಲಿಯನ್‌ಗಟ್ಟಲೆ ದುಡಿದು ಈಗ ಸುಮಾರು ಬಿಲಿಯನ್ ಡಾಲರ್ ವಹಿವಾಟಿನ ಸರದಾರ. ತನ್ನ ಚುನಾವಣೆಗೆ ಬೇಕಾದ ಹಣವನ್ನು ಇತರರಿಂದ ಬೇಡುವ ಹಂಗಿಲ್ಲದ ಅಪರೂಪದ ಸಾಮರ್ಥ್ಯ ಹೊಂದಿರುವವ.

ವಿವೇಕ್ ಒಳ್ಳೆಯ ವಾಗ್ಮಿ. ಇತರ ಸ್ಪರ್ಧಿಗಳ ಜೊತೆ ಡಿಬೇಟ್ ಮಾಡುವಾಗ ನಿರರ್ಗಳವಾಗಿ ಕಡ್ಡಿ ತುಂಡು ಮಾಡಿದಂತೆ ನಿಖರವಾಗಿ ವಾದಗಳನ್ನು ಮಂಡಿಸುವ ಸ್ವಭಾವ. ಚಿಕ್ಕ ವಯಸ್ಸಿನಲ್ಲೇ ದುಡ್ಡು ಮಾಡಿರುವ ಹಮ್ಮು, ಪ್ರಪಂಚದಲ್ಲಿ ತನ್ನಂಥ ಜ್ಞಾನಿ ಮತ್ತೊಬ್ಬನಿಲ್ಲವೆಂಬ ಧೋರಣೆಯೂ ಇದೆ. ಆತನ ಪ್ರತಿಸ್ಪರ್ಧಿಗಳಲ್ಲಿ, ಫ್ಲಾರಿಡಾ ಪ್ರಾಂತ್ಯದ ಹಾಲಿ ಗವರ್ನರ್, ದಕ್ಷಿಣ ಕ್ಯಾರೊಲೈನಾದ ಮಾಜಿ ಗವರ್ನರ್, ನ್ಯೂ ಜೆರ್ಸಿ ಪ್ರಾಂತ್ಯದ ಮಾಜೀ ಗವರ್ನರ್, ಹೀಗೆ ರಾಜಕೀಯ ಮತ್ತು ಆಡಳಿತದಲ್ಲಿ ಹೆಚ್ಚಿನ ಪರಿಣತಿ ಉಳ್ಳವರಿದ್ದಾರೆ. ಆದರೂ ಈತ ಹೆದರುವ ಗಿರಾಕಿಯಲ್ಲ, ಪ್ರತಿ ಸಮಸ್ಯೆಗೂ ದಿಢೀರ್ ಪರಿಹಾರ ಆತನ ಬತ್ತಳಿಕೆಯಲ್ಲಿ ಸಿದ್ಧವಾಗಿರುತ್ತದೆ. 'ಸರ್ಕಾರಕ್ಕೆ ಇಷ್ಟೊಂದು ಇಲಾಖೆಗಳೇಕೆ? ನಾನೇನಾದರೂ ಅಧ್ಯಕ್ಷನಾದರೆ, ಡಿಪಾರ್ಟ್‌ಮೆಂಟ್ ಆಫ್ ಎನರ್ಜಿ, ಎಜುಕೇಶನ್, ಎನ್ವಿರಾನ್ಮೆಂಟಲ್ ಪ್ರೊಟೆಕ್ಶನ್ ಏಜೆನ್ಸಿ, ನ್ಯೂಕ್ಲಿಯರ್ ರೆಗ್ಯುಲಟೋರಿ ಕಮೀಶನ್, ಇನ್ನೂ ಮುಂತಾದ ಇಲಾಖೆಗಳನ್ನು ಮುಚ್ಚುತ್ತೇನೆ. ಸರ್ಕಾರಿ ನೌಕರರ ಸಂಖ್ಯೆಯನ್ನು ತೀವ್ರವಾಗಿ ತುಂಡರಿಸುವುದೇ ಅಲ್ಲದೇ ಅವರಿಗೆ ಇರುವ ಹಲವಾರು ಸೌಲಭ್ಯಗಳು ಹಾಗು ಕೆಲಸ ಕಾಯಂ ಆಗಿರುವಿಕೆಯ ಸ್ಥಿರತೆಯನ್ನು ತೆಗೆದುಹಾಕುತ್ತೇನೆ. ಎಲ್ಲರೂ ಕಾಲೇಜಿಗೇಕೆ ಹೋಗಬೇಕು? ಕಾಲೇಜಿನ ಪದವಿಗಳಿಂದ

ಹೆಚ್ಚಿನ ಪ್ರಯೋಜನವಿಲ್ಲ, ಪ್ರಪಂಚದ ಹವಾಗುಣ ಬದಲಾಗುತ್ತಿಲ್ಲ, ಆದರೂ ತಾನೆ ಏನು?' ಮುಂತಾದ 'ಗುಡಿಸು–ಹೇಳಿಕೆ'ಗಳನ್ನು (ಸ್ವೀಪಿಂಗ್ ಸ್ಟೇಟ್ಮೆಂಟ್ಸ್) ಕೊಡುವುದರಲ್ಲಿ ನಿಪುಣನಾಗಿರುವವನೀತ.

ಈತ ನಿಜವಾಗಿಯೂ ಅಸಾಧಾರಣ ಬುದ್ಧಿವಂತನೇ ಎಂಬುವುದರಲ್ಲಿ ಅನುಮಾನವಿಲ್ಲ. ಆದರೆ, ಅನುಭವ ಸಾಲದೆ ಇರುವುದರಿಂದ, ಆತನ ಹೇಳಿಕೆಗಳನ್ನು ಗಂಭೀರವಾಗಿ ತೆಗೆದುಕೊಳ್ಳುವುದು ಕಷ್ಟ. ಆತನ ಅಭಿಪ್ರಾಯಗಳು ಹೆಚ್ಚೂಕಮ್ಮಿ ಇತರ ರಿಪಬ್ಲಿಕನ್ನರದಂತೆಯೇ ಇದ್ದರೂ ಇನ್ನೂ ಅತಿರೇಕವೆನ್ನಬಹುದು. ಉದಾಹರಣೆಗೆ, 'ಎಣ್ಣೆ ಬಾವಿಗಳನ್ನು ಹೆಚ್ಚುಹೆಚ್ಚು ತೋಡಬೇಕು, ಭೂಮಿಯಲ್ಲಡಗಿರುವ ತೈಲಭರಿತ ಶಿಲೆಗಳಿಂದ ಎಣ್ಣೆಯ ಹರಿವನ್ನು ಹೆಚ್ಚಿಸಲು ಶಿಲೆಯನ್ನು ಸಿಡಿಸಿ ಎಣ್ಣೆ ಬಾವಿಗೆ ಇಳಿಯುವಂತೆ ಮಾಡುವ 'ಫ್ರ್ಯಾಕಿಂಗ್' ಕ್ರಮವನ್ನು ಅನುಸರಿಸಬೇಕು, ಹವಾಗುಣ ವೈಪರೀತ್ಯ ಒಂದು ಹುಚ್ಚು ಕಲ್ಪನೆ, ಹೆಚ್ಚು ಹೆಚ್ಚು ಕಲ್ಲಿದ್ದಲನ್ನು ಅಗೆದು ಉರಿಸಿ ಇಂಧನ ಉತ್ಪನ್ನ ಮಾಡಬೇಕು, ಅಣುಶಕ್ತಿಯನ್ನು ಹೆಚ್ಚಿಸುವುದರಿಂದ ಯಾವ ಅಪಾಯವೂ ಇಲ್ಲ, ವಿದ್ಯುತ್ ಕಾರುಗಳೇಕೆ ಬೇಕು' ಇವೇ ಮುಂತಾದ ಮಾತುಗಳಿಂದ ಇತರ ಬಲಪಂಥೀಯರಿಗಿಂತ ತಾನು ಹೆಚ್ಚು ಬಲಪಂಥೀಯನೆಂದು ಜಗಕ್ಕೆ ತೋರಿಸಬೇಕು ಎಂಬುದು ಈತನ ನಿಲುವೇನೋ ಎಂಬ ಅನುಮಾನ ಬರುತ್ತದೆ. ದೇಶದ ಅಗತ್ಯಕ್ಕೆ ತಕ್ಕಂತೆ ಪ್ರತಿಯೊಂದನ್ನೂ ಪರಿಗಣಿಸಿ ಇತಿಮಿತಿಗಳನ್ನೂ ಪರಿಶೀಲಿಸಬೇಕಲ್ಲವೇ? ದೀರ್ಘಕಾಲೀನ ಫಲಿತಾಂಶಗಳನ್ನು ಗಮನದಲ್ಲಿಟ್ಟುಕೊಂಡು ತೀರ್ಮಾನಿಸಬೇಕಲ್ಲವೇ? ಆದರೆ ಈತ ಸ್ವಲ್ಪ ಬೇಕಾಬಿಟ್ಟಿ ಮಾತಾಡುವ ಅಭ್ಯಾಸದವ. ಅನೇಕ ರಿಪಬ್ಲಿಕನ್ನರಿಗಿರುವಂತೆ ಮತ್ತು ಬಂಡವಾಳಶಾಹಿಗಳಿಗಿರುವಂತೆ, ಈತನಿಗೂ ಸರ್ಕಾರ ಕೊಡುವ ಬಿಟ್ಟಿ ಸವಲತ್ತುಗಳನ್ನು ನಂಬಿ ದುಡಿಯದೆ ಮನೆಯಲ್ಲಿ ಕೂರುವ ಜನರ ಬಗ್ಗೆ ತುಂಬಾ ಕೋಪವಿದೆ. ದೊಡ್ಡ ಕಾರ್ಪೊರೇಶನ್‌ಗಳಿಗೆ ಸರ್ಕಾರ ತೆರಿಗೆ ವಿನಾಯತಿಯ ಮೂಲಕ ಧಾರಾಳತನ ತೋರುವುದಾದರೆ, ಬಡವರ ಬಗ್ಗೆ ಅಷ್ಟೊಂದು ಕ್ರೌರ್ಯ ಸರಿಯೇ? ಆದರೆ ಇಂಥ ಭಾಷೆಯನ್ನು ಪಯೋಗಿಸದಿದ್ದರೆ ರಿಪಬ್ಲಿಕನ್ ಪ್ರೈಮರಿಯಲ್ಲಿ ಗೆಲ್ಲುವುದಾದರೂ ಹೇಗೆ?

## ಹಿಂದು ಎನ್ನಲು ಹಿಂಜರಿಕೆಯಿಲ್ಲ

ಅಮೆರಿಕದ ತಳಪಾಯವೆಂದರೆ 'ಜುಡಾಯೋ–ಕ್ರಿಶ್ಚಿಯನ್' ಮೌಲ್ಯಗಳು. ಕ್ರಿಶ್ಚಿಯನ್ ಅಲ್ಲದ ಒಬ್ಬ ಸ್ಪರ್ಧಿಯನ್ನು ಅಮೆರಿಕನ್ನರು ಸುಲಭವಾಗಿ ಒಪ್ಪಿಕೊಳ್ಳಲಾರರು. ತಾನೊಬ್ಬ ಹಿಂದೂ ಎಂಬುದನ್ನು ಗರ್ವದಿಂದ ಹೇಳಿಕೊಳ್ಳುವ ಧೈರ್ಯ ಈತನಿಗಿರುವುದು ನಿಜವಾಗಿಯೂ ಮೆಚ್ಚತಕ್ಕ ಗುಣವಾಗಿದೆ. ಹಾಗೆ ನೋಡಿದರೆ ಈತನ ಪ್ರತಿಸ್ಪರ್ಧಿಯಾಗಿರುವ ಭಾರತೀಯ ಮೂಲದ ಮಹಿಳೆ ನಿಕ್ಕಿ ಹೇಲಿ ಕ್ರಿಶ್ಚಿಯಾನಿಟಿಯನ್ನು ಒಪ್ಪಿಕೊಂಡಿರುವಾಕೆ. ಅಮೆರಿಕದಲ್ಲಿ ಕ್ಯಾಥೊಲಿಕರನ್ನು ಒಪ್ಪಿಕೊಳ್ಳಲು ಬಹಳಷ್ಟು ಸಮಯ ಹಿಡಿಯಿತು. ಕೆನೆಡಿ ಚುನಾಯಿತನಾದಾಗ ಅದೊಂದು ಪವಾಡವೇ ಎನ್ನುವಷ್ಟು ಚರ್ಚೆಯಾಗಿತ್ತು. ಯೂಟಾ ಪ್ರಾಂತ್ಯದ ಮಿಟ್ಟ್ ರಾಮ್ನಿಯನ್ನು




**ನಾನು ಹಿಂದು ಧರ್ಮದಲ್ಲಿ ಅಪಾರ ನಂಬಿಕೆ ಇಟ್ಟಿದ್ದೇನೆ. ಈ ನಂಬಿಕೆಯೇ ನನ್ನನ್ನು ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಲು ಸ್ಫೂರ್ತಿಯಾಗಿದೆ. ನಾನೊಬ್ಬ ಹಿಂದು ಎಂದು ಹೇಳಿಕೊಳ್ಳಲು ಹೆಮ್ಮೆ ಎನಿಸುತ್ತದೆ. ನಾನು ನಂಬಿಕೆ ಇಟ್ಟಿರುವ ಹಿಂದು ಧರ್ಮವು ನನ್ನಲ್ಲಿ ನೈತಿಕ ಮೌಲ್ಯಗಳನ್ನು ತುಂಬಿದೆ. ನಮ್ಮೆಲ್ಲರ ಮೇಲೆ ದೇವರ ಆಶೀರ್ವಾದ ಇದೆ ಎಂಬ ಕಾರಣಕ್ಕಾಗಿಯೇ ಎಲ್ಲರೂ ಸಮಾನರು ಎಂದು ನನ್ನ ನಂಬಿಕೆ ತಿಳಿಸುತ್ತದೆ. ಇನ್ನೊಬ್ಬರಿಗೆ ಒಳಿತು ಮಾಡಬೇಕು, ಬೇರೆಯವರಿಗೆ ಸಂಬಂಧಿಸಿದ ಯಾವುದೇ ವಸ್ತುವನ್ನು ಕದಿಯಬಾರದು, ಮದುವೆ ಎಂಬುದು ಪವಿತ್ರ ಬಂಧ, ವಿಚ್ಛೇದನ ಮಾಡಿಕೊಳ್ಳಬಾರದು, ಬೇರೆಯವರಿಗೆ ಕೇಡು ಬಯಸಬಾರದು, ಕಾಯಕದಲ್ಲಿ ನಿರತನಾಗಿರಬೇಕು ಎಂಬುದು ಸೇರಿ ಹಲವು ಮೌಲ್ಯಗಳನ್ನು ನಮ್ಮ ಧರ್ಮವು ತಿಳಿಸಿಕೊಟ್ಟಿದೆ.**

**– ವಿವೇಕ್ ರಾಮಸ್ವಾಮಿ**

ಅನೇಕ ಮತದಾರರು ನಿರಾಕರಿಸಿದ್ದಕ್ಕೆ ಕಾರಣ ಆತ ಮಾರ್ಮನ್ ಪಂಗಡಕ್ಕೆ ಸೇರಿದವನು ಎಂಬುದೇ ಆಗಿತ್ತು. ಒಬಾಮನಂತಹ ಒಬ್ಬ ವರ್ಣೀಯ ಅಮೆರಿಕದ ಅಧ್ಯಕ್ಷಪೀಠವನ್ನೇರಲು ಶತಮಾನಗಳೇ ಕಳೆದವು. ಅಮೆರಿಕನ್ನರು ಇನ್ನೂ ಮಹಿಳೆಯನ್ನು ಅಧ್ಯಕ್ಷೆಯಾಗಲು ಬಿಟ್ಟಿಲ್ಲ. ಹೀಗಿರುವಲ್ಲಿ ವಿವೇಕ್ ರಾಮಸ್ವಾಮಿಗೆ ಅಧ್ಯಕ್ಷಸ್ಥಾನ ದೊರಕುವ ಸಂಭವನೀಯತೆ ಕಮ್ಮಿ ಎನಿಸುತ್ತದೆ. ಇದಕ್ಕೂ ಮೊದಲು ಆತ ಕಾಂಗ್ರೆಸ್‌ಮನ್ ಆಗಿಯೋ ಸೆನೆಟರ್ ಆಗಿಯೊ ಚುನಾಯಿತನಾದರೆ ಒಳ್ಳೆಯ ಅನುಭವ ದೊರಕೀತು.

ಎಲ್ಲಕ್ಕಿಂತ ಸ್ವಾರಸ್ಯಕರ ವಿಷಯವೆಂದರೆ, ರಿಪಬ್ಲಿಕನ್ ಪಕ್ಷದ ಯಾವ ಡಿಬೇಟಿನಲ್ಲೂ ಮುಖ ತೋರಿಸದೆ ಜನಾಭಿಪ್ರಾಯದಲ್ಲಿ ಎಲ್ಲರಿಗಿಂತ ಮುಂದಿರುವ ಮಹಾಶಯ ಡೊನಾಲ್ಡ್ ಟ್ರಂಪ್. ಟ್ರಂಪ್ ಮಾಡಿರುವ ರಾದ್ಧಾಂತಗಳು ಒಂದೆರಡಲ್ಲ. ರಾಜಧಾನಿಯ ಹೆಗ್ಗುರುತಾದ ಕ್ಯಾಪಿಟೋಲ್ ಸೌಧದ ಮೇಲೆ ಲಗ್ಗೆ ಹಾಕುವಂತೆ ಪ್ರೋತ್ಸಾಹಿಸಿ ತನ್ನ ಅನುಯಾಯಿಗಳನ್ನು ನುಗ್ಗಲು ಬಿಟ್ಟು, ಅವರನ್ನು ತಡೆಯುವ ಯಾವ ಯತ್ನವನ್ನೂ ಮಾಡದೆ ಅಲ್ಲಿ ನಡೆಯುತ್ತಿರುವ ಹಗರಣವನ್ನು ಟಿವಿಯ ಪರದೆಯಮೇಲೆ

ನೋಡಿ ಆನಂದಿಸುತ್ತ ಆರಾಮಾಗಿದ್ದ ಭೂಪ. ಅಮೆರಿಕವನ್ನು ಮಹಾನ್ ಮಾಡಲು ಹೊರಟ ಮಹಾನುಭಾವ. ಈತನ ಪ್ರೈಮರಿ–ಪ್ರತಿಸ್ಪರ್ಧಿಗಳು, ಟ್ರಂಪ್ ಅನುಯಾಯಿಗಳು ತಮ್ಮ ಕೈಬಿಟ್ಟಾರೆಂಬ ಭಯದಿಂದ ಆತನನ್ನು ಪರೋಕ್ಷವಾಗಿ ಸಹ ನಿಂದಿಸದೆ ಮುಂದುವರೆದಿದ್ದಾರೆ. ಕ್ರಿಸ್ ಕ್ರಿಸ್ಟಿ (ನ್ಯೂ ಜೆರ್ಸಿಯ ಮಾಜೀ ಗವರ್ನರ್) ಒಬ್ಬ ಮಾತ್ರ ಇದಕ್ಕೆ ಹೊರತು. ವಿವೇಕ್ ಎಷ್ಟರ ಮಟ್ಟಿಗೆ ಟ್ರಂಪ್ ಅನುಯಾಯಿ ಆಗಿರುವನೆಂದರೆ, 'ನಾನು ಅಧ್ಯಕ್ಷನಾದ ಗಳಿಗೆಯಲ್ಲೇ ಟ್ರಂಪ್ ಮಾಡಿರಬಹುದಾದ ಎಲ್ಲಾ ಅಪರಾಧಗಳನ್ನೂ ಕ್ಷಮಿಸುವೆ' (ಅರ್ಥಾತ್, ಯಾರಾದರೂ ತೀರ್ಪುಗಾರರು ಆತನಿಗೆ ಶಿಕ್ಷೆ ವಿಧಿಸುವ ಗೋಜಿಗೆ ಹೋದರೆ, ಟ್ರಂಪ್ ಜೈಲಿಗೆ ಹೋಗದಂತೆ ನೋಡಿಕೊಳ್ಳುವೆ!) ಎಂದು ಘೋಷಿಸಿದ್ದು. ಇದರ ಗೂಢಾರ್ಥವೆಂದರೆ, ವಿವೇಕ್ ಆದಿಯಾಗಿ ಯಾರೂ ಟ್ರಂಪ್ ವಿರೋಧ ಕಟ್ಟಿಕೊಳ್ಳಲು ತಯಾರಿಲ್ಲ. ಮತ್ತು, ಟ್ರಂಪ್ ಒಂದು ವೇಳೆ ಅಭ್ಯರ್ಥಿಯಾಗಿ ನಾಮಾಂಕನಗೊಂಡರೆ, ಉಪಾಧ್ಯಕ್ಷ ಸ್ಥಾನಕ್ಕೆ ತಮ್ಮನ್ನೇ ಆಯ್ದುಕೊಳ್ಳುವ ಅವಕಾಶವನ್ನು ಕೈಯಾರ ಕಳೆದುಕೊಳ್ಳಬಾರದು ಎಂದೇ ಅಲ್ಲವೇ? 'ಟ್ರಂಪ್ ಮಹಾಶಯನ ಅಧ್ಯಕ್ಷತೆಯಲ್ಲಿದ್ದಂತಹ ಉತ್ತಮ ಆಡಳಿತವನ್ನು ಅಮೆರಿಕ ಹಿಂದೆಂದೂ ಕಂಡಿಲ್ಲ' ವೆಂದು ಘಂಟಾಘೋಷವಾಗಿ ವಿವೇಕ್ ತನ್ನ ಭಾಷಣಗಳಲ್ಲಿ ಹೇಳುತ್ತಾ ಬಂದಿರುವುದರಿಂದ,




ವಿವೇಕ್ ಈ ಬಾರಿ ಉಪಾಧ್ಯಕ್ಷಸ್ಥಾನಕ್ಕೇ ಯತ್ನಿಸುತ್ತಿರಬಹುದು ಎಂದೂ ಖಚಿತವಾಗುತ್ತದೆ. ರಷ್ಯಾ ವಿರುದ್ಧ ಹೋರಾಡುತ್ತಿರುವ ಯುಕ್ರೇನ್ ದೇಶಕ್ಕೆ ಧನ/ಆಯುಧ ಸಹಾಯ ಮುಂತಾದುವನ್ನು ಮಾಡಕೂಡದೆಂಬುದು ವಿವೇಕ್ ಅಭಿಪ್ರಾಯ. ಹಮಾಸ್ ವಿರುದ್ಧ ಹೋರಾಡುತ್ತಿರುವ ಇಸ್ರೇಲ್ ದೇಶಕ್ಕೆ ಎಲ್ಲಾ ರೀತಿಯ ಸಹಾಯ ಒದಗಿಸಬೇಕೆಂಬುದೂ ಈತನ ಮತ. ಇವೆರಡೂ ಟ್ರಂಪನ ಮತ ಸಹ. ಈ ಬಗ್ಗೆ ಸಾಕಷ್ಟು ಭಿನ್ನಾಭಿಪ್ರಾಯವಿರುವುದರಿಂದ ಅನೇಕ ಅಮೆರಿಕನ್ನರು ವಿವೇಕ್ ಪರವಿಲ್ಲ ಎನ್ನಬಹುದು. ಟ್ರಂಪ್ ಬಗ್ಗೆ ಕೋಪ ಅಥವಾ ವಿರೋಧ ಇರುವವರೂ ಸಹ ವಿವೇಕ್ ಬಗ್ಗೆ ವಿರೋಧ ತೋರುವ ಸಾಧ್ಯತೆ ಇದೆ. ಮೊದಮೊದಲು, ವಿವೇಕ್ ಹೇಳುತ್ತಿದ್ದುದು, ಅಮೆರಿಕ ಇಬ್ಭಾಗವಾಗಿದೆ, ಜನರು ಪರಸ್ಪರ ದ್ವೇಷಿಸುವಷ್ಟು ಭಿನ್ನಮತೀಯರಾಗಿದ್ದಾರೆ ಎಂದು. ಆದರೆ ಇತ್ತೀಚಿನ ಒಂದು ಸಭೆಯಲ್ಲಿ 'ಅದು ಹಾಗೇನಿಲ್ಲ, ಅಮೆರಿಕನ್ನರು ಒಬ್ಬರನ್ನೊಬ್ಬರು ತುಂಬಾ ಪ್ರೀತಿಸುವಷ್ಟು ಉದಾರಿಗಳು ಎಂಬುದು ನನಗೆ ಇತ್ತೀಚಿನ ಅಮೆರಿಕ ಪರ್ಯಟನದಲ್ಲಿ ಗೋಚರಿಸಿದ ಸತ್ಯ' ಎಂದು ಹೇಳಿಕೆ ಕೊಟ್ಟಿದ್ದು ಅನೇಕರಿಗೆ ಅಚ್ಚರಿ ಉಂಟುಮಾಡಿದೆ. ಸಭೆಯನ್ನು ಯಾರು ನಡೆಸುತ್ತಿದ್ದಾರೆ, ಸಭೆಯಲ್ಲಿ ಯಾರು ಹಾಜರಿದ್ದಾರೆ ಮುಂತಾದವಕ್ಕೆ ಅನುಗುಣವಾಗಿ ಪುಢಾರಿಗಳ ಅಭಿಪ್ರಾಯಗಳು ಬದಲಾಗುವುದು ನಿರೀಕ್ಷಿತವೇ!

## ಭಾರತಕ್ಕೆ ಏನು ಪ್ರಯೋಜನ?

ಒಂದು ವೇಳೆ ವಿವೇಕ್ ಅಮೆರಿಕದ ಅಧ್ಯಕ್ಷನಾದಲ್ಲಿ ಇದರಿಂದ ಭಾರತಕ್ಕೆ ಪ್ರಯೋಜನವಾಗಬಹುದೇ ಎಂಬುದು ಭಾರತೀಯರನ್ನು ಕಾಡುವ ಪ್ರಶ್ನೆ. ಭಾರತೀಯ ಮೂಲದ ಅಮೆರಿಕನ್ನರು ವಿವೇಕ್ ರಾಮಸ್ವಾಮಿಗೆ ಮತ ಹಾಕುವರೇ? ಈ ಪ್ರಶ್ನೆಗೆ ಉತ್ತರ ಹೇಳುವುದೂ ಕೊಂಚ ಕಷ್ಟವೇ. ಭಾರತೀಯರಲ್ಲಿ ಎರಡೂ ಪಕ್ಷಗಳ ಅನುಯಾಯಿಗಳಿದ್ದಾರೆ. ಆದರೆ ಎರಡೂ ಪಕ್ಷಗಳ ಬಗ್ಗೆ ಅವರಿಗೆ ತಕರಾರುಗಳಿವೆ. ಭಾರತೀಯ ಮೂಲದವನೆಂಬ ಕಾರಣಕ್ಕೇ ಮತ ಹಾಕಲಾರರು. ಒಂದು ವೇಳೆ ಆತನಿಗೇ ನಾಮಾಂಕನವಾದರೆ, ಆತ ತನ್ನ ನಿಲುವುಗಳನ್ನು ಮತ್ತಷ್ಟು ಚೂಪುಗೊಳಿಸಿ, ಕಡ್ಡಿ ತುಂಡು ಮಾಡುವ ಭಾಷೆಯನ್ನು ಸ್ವಲ್ಪಮಟ್ಟಿಗೆ ಮಾಗಿಸಿದರೆ, ಒಬ್ಬ ಬುದ್ಧಿವಂತ, ಚಿಕ್ಕ ವಯಸ್ಸಿನಲ್ಲೇ ಹೆಚ್ಚಿನ ಸಾಧನೆ ಮಾಡಿದವನೆಂಬ ಹೆಮ್ಮೆಯಿಂದ ಪ್ರೋತ್ಸಾಹಿಸಲೂಬಹುದು. ವೈಯಕ್ತಿಕವಾಗಿ ಹೇಳುವುದಾದರೆ, ಟ್ರಂಪ್ ಮಹಾಶಯನನ್ನು ಈತ ಕ್ಷಮಿಸುವುದಾದರೆ, ನಾನು ಈತನನ್ನು ಕ್ಷಮಿಸಲಾರೆ. ಭಾರತದ ದೃಷ್ಟಿಯಿಂದ ಹೇಳುವುದಾದರೆ, ಅಮೆರಿಕದ ಅಧ್ಯಕ್ಷ ಯಾರೇ ಆದರೂ ಇತರ ದೇಶದ ಹಿತವನ್ನು ಅವರು ಕಾಯುವ ಕಷ್ಟಕ್ಕೆ ಹೋಗುವುದಿಲ್ಲ. ಭಾರತ ತನ್ನಷ್ಟಕ್ಕೆ ತಾನು ಶಕ್ತಿಶಾಲಿಯಾಗಲಿ ಆರ್ಥಿಕವಾಗಿ ಮತ್ತು ದೇಶರಕ್ಷಣೆಯ ದೃಷ್ಟಿಯಿಂದ. ಆದರೆ, ಭಾರತದಿಂದ ಮತ್ತು ಭಾರತೀಯರಿಂದ ತನಗೆ ಅನುಕೂಲವಿದೆಯೆಂಬ ವಿಷಯ ಖಚಿತವಾದಲ್ಲಿ ಅಮೆರಿಕ ತನ್ನ ಸ್ವಾರ್ಥಕ್ಕಾಗಿಯಾದರೂ ಭಾರತವನ್ನು ಬೆಂಬಲಿಸಬಹುದು.

## ಹೆಸರಿನ ಅಪಹಾಸ್ಯ

ವಿವೇಕ್ ರಾಮಸ್ವಾಮಿ ಎಂಬ ಹಿಂದೂ ಹೆಸರನ್ನು ಹೆಚ್ಚಿನ ಪತ್ರಕರ್ತರು ಸರಿಯಾಗಿಯೇ ಉಚ್ಚರಿಸುವ ಶ್ರಮವನ್ನು ಪ್ರದರ್ಶಿಸಿದ್ದಾರೆ. ಆದರೆ ಇತ್ತೀಚಿನ ಒಂದು ಟಿವಿ ಕಾರ್ಯಕ್ರಮದಲ್ಲಿ ಡೆಮೊಕ್ರ್ಯಾಟಿಕ್ ಪಕ್ಷದ ಡಾನಾ ಬ್ರೆಜಿಲ್ ಎಂಬಾಕೆ ವಿವೇಕ್ ರಾಮಸ್ವಾಮಿಯ ಹೆಸರನ್ನು ಕುಲಗೆಡಿಸಿದ್ದೇ ಅಲ್ಲದೇ, ಅಪಹಾಸ್ಯ ಮಾಡಿ 'ನೀನು ಬಂದೆಡೆಗೇ ಹಾಳಾಗಿ ಹೋಗು' ಎಂಬರ್ಥದಲ್ಲಿ ಮಾತಾಡಿದ್ದು ನನಗೆ ಕೋಪ ತರಿಸಿತು. ಅಮೆರಿಕ ತನಗೆ ಪರಿಚಯವಿಲ್ಲದ ಹೆಸರುಗಳಿಗೆ ತನ್ನ ಕಿವಿಗಳನ್ನು ರೂಢಿಸಿಕೊಳ್ಳುವ ಸಮಯವಿದು. ಭಾರತೀಯರು ಮತ್ತು ಇತರ ದೇಶದಿಂದ ಬಂದು ನೆಲೆಸಿದವರು ಕಷ್ಟಪಟ್ಟು ದುಡಿದು ಪ್ರತಿಭಾಶಾಲಿಯಾದ ಮುಂದಿನ ಜನಾಂಗವನ್ನು ಸೃಷ್ಟಿಸಿದ್ದಾರೆ. ಅವರಲ್ಲಿ ಯಾರಾದರೂ ಉನ್ನತ ಸ್ಥಾನವನ್ನು ಗಳಿಸಿಕೊಳ್ಳಲಿ ಎಂಬುದು ನನ್ನ ಆಶಯ.

**(ತಮ್ಮ ಅಭಿಪ್ರಾಯವನ್ನು 9611766820ಗೆ ವಾಟ್ಸಾಪ್ ಮಾಡಿ.)**